# ದೃಷ್ಟಾಂತ ಕಥೆಗಳು

■ ಮೂಲ: ಖಲೀಲ್ ಗಿಬ್ರಾನ್ ■ ಕನ್ನಡಕ್ಕೆ: ಡಾ.ಎಚ್.ಎಸ್. ಅನುಪಮಾ

## ನ್ಯಾಯ ಮತ್ತು ನ್ಯಾಯದಾನ

ಎಷ್ಟೋ ವರ್ಷಗಳ ಕೆಳಗೆ ಒಬ್ಬ ಮಹಾನ್ ಚಕ್ರವರ್ತಿಯಿದ್ದ. ಅವನು ತುಂಬ ಜ್ಞಾನಿಯಾಗಿದ್ದ. ತನ್ನ ಪ್ರಜೆಗಳ ಹಿತಕ್ಕಾಗಿ ನ್ಯಾಯ ಕಾನೂನುಗಳನ್ನು ರೂಪಿಸಲು ಬಯಸಿದ್ದ. ಅವನು ಒಂದು ಸಾವಿರ ಭಿನ್ನ ಬುಡಕಟ್ಟುಗಳಿಗೆ ಸೇರಿದ ಒಂದು ಸಾವಿರ ಪಂಡಿತೋತ್ತಮರನ್ನು ತನ್ನ ರಾಜಧಾನಿಗೆ ಕರೆದು ನಿಯಮಗಳನ್ನು ರೂಪಿಸಲು ಕೇಳಿಕೊಂಡ.

ಆ ಕೆಲಸ ಮುಗಿಯುತ್ತ ಬಂತು.

ಆದರೆ ಓಲೆಗರಿಯ ಮೇಲೆ ಬರೆದ ಒಂದು ಸಾವಿರ ನಿಯಮಗಳನ್ನು ಚಕ್ರವರ್ತಿಯ ಮುಂದೆ ತರಲಾಯಿತು. ಅವನು ಅದನ್ನು ಓದಿ ಅವನ ಆತ್ಮ ಬಿಕ್ಕಿ ಬಿಕ್ಕಿ ಅತ್ತಿತು. ಏಕೆಂದರೆ ಒಂದು ಸಾವಿರ ರೀತಿಯ ಅಪರಾಧ ಬೇರೆ ಬೇರೆ ವೇಷ ತೊಟ್ಟು ತನ್ನ ರಾಜ್ಯದಲ್ಲಿದೆಯೆಂದು ಅವನಿಗೆ ಅದುವರೆಗೂ ತಿಳಿದೇ ಇರಲಿಲ್ಲ.

ನಂತರ ಅವನು ತನ್ನ ಕರಣಿಕರನ್ನು ಕರೆದು ಮುಗುಳ್ನಗುತ್ತ ಆ ನಿಯಮಗಳನ್ನು ತಾನೇ ಹೇಳಿ ಬರೆಸಿದ. ಅವನು ಬರೆಸಿದ್ದು ಕೇವಲ ಏಳು ಕಾನೂನುಗಳನ್ನು ಮಾತ್ರ.

ಆಗ ಆ ಒಂದು ಸಾವಿರ ಪಂಡಿತರು ಕೋಪದಲ್ಲಿ ಆಸ್ಥಾನ ಬಿಟ್ಟು ಹೊರಟು ಹೋದರು. ತಂತಮ್ಮ ಬುಡಕಟ್ಟು ಕುಲಗಳಿಗೆ ತಾವು ಬರೆದ ನಿಯಮಗಳನ್ನೇ ಪಾಲಿಸುವಂತೆ ಬೋಧಿಸಿದರು. ಪ್ರತಿ ಕುಲವೂ ತನ್ನ ಕುಲದ ಪಂಡಿತ ಬರೆದ ಕಾನೂನನ್ನೇ ಅನುಸರಿಸಿತು.

ಅದಕ್ಕೇ ಈ ದಿನದವರೆಗೆ ಒಂದು ಸಾವಿರ ಕಾನೂನುಗಳಿವೆ.

ಇದೊಂದು ಮಹಾನ್ ದೇಶ. ಇದರಲ್ಲಿ ಒಂದು ಸಾವಿರ ಸೆರೆಮನೆಗಳಿವೆ. ಅವೆಲ್ಲ ಸಾವಿರ ಕಾನೂನು ಭಂಗ ಮಾಡಿದ ಸ್ತ್ರೀಪುರುಷರಿಂದ ತುಂಬಿ ಹೋಗಿವೆ.

ಇದು ನಿಜವಾಗಿ ಮಹಾನ್ ದೇಶ. ಇಲ್ಲಿನ ಜನ ಒಂದು ಸಾವಿರ ಕಾನೂನು ಮಾಡಿದವರ ಹಾಗೂ ಒಬ್ಬ ಜ್ಞಾನಿ ಚಕ್ರವರ್ತಿಯ ವಂಶಸ್ಥರೇ ಆಗಿದ್ದಾರೆ.



ಚಿತ್ರಗಳು: ಈಶ್ವರ ಬಡಿಗೇರ



## ಖುಷಿ ಮತ್ತು ಪ್ರಾಣಿಗಳು

ಹಚ್ಚಹಸಿರಿನ ಬೆಟ್ಟಗಳ ತಪ್ಪಲಲ್ಲಿ ಒಬ್ಬ ಋಷಿ ವಾಸಿಸುತ್ತಿದ್ದ. ಅವನ ಆತ್ಮ, ಹೃದಯ ಶುದ್ಧವಾಗಿದ್ದವು. ನೆಲದ ಮೇಲಿನ ಎಲ್ಲ ಪ್ರಾಣಿಗಳು, ಆಗಸದಲ್ಲಿ ಹಾರುವ ಹಕ್ಕಿಗಳೂ ಜೊತೆಜೊತೆಯಲ್ಲಿ ಬಂದು ಕುಳಿತು ಅವನು ಹೇಳುವುದನ್ನು ಕೇಳುತ್ತಿದ್ದವು. ಅವನ ಸುತ್ತ ಕುಳಿತು, ಸಂತಸದಿಂದ ಅವನನ್ನಾಲಿಸುತ್ತಾ, ರಾತ್ರಿ ಕಳೆದರೂ ಅವನ ಬಳಿಯಿಂದ ಎದ್ದುಹೋಗದೇ ಉಳಿಯುತ್ತಿದ್ದವು. ಅವನೇ ಅವರನ್ನು ಭೂಮಿಗೂ, ಆಗಸಕ್ಕೂ ಒಪ್ಪಿಸಿ ವಿದಾಯ ಹೇಳಿ ಕಳಿಸುತ್ತಿದ್ದನು.

ಒಂದು ಸಂಜೆ ಅವನು ಪ್ರೇಮದ ಕುರಿತು ಮಾತನಾಡುತ್ತಿದ್ದ. ಒಂದು ಚಿರತೆ ತನ್ನ ತಲೆಯೆತ್ತಿ ಅವನನ್ನು ಕೇಳಿತು, `ಪ್ರೇಮಿಸುವ ಬಗ್ಗೆ ನೀನು ನಮಗೆ ಹೇಳುತ್ತಿದ್ದೀ, ಹೇಳು ಮುನಿಯೇ, ನಿನ್ನ ಸಂಗಾತಿ ಎಲ್ಲಿ?'

`ನನಗೆ ಸಂಗಾತಿಯಿಲ್ಲ', ಅವನೆಂದ.

ಅಚ್ಚರಿಯ ದೊಡ್ಡ ಉದ್ಗಾರ ಎಲ್ಲ ಪ್ರಾಣಿಗಳ ಬಾಯಿಯಿಂದಲೂ ಹೊರಟಿತು. ಅವು ತಂತಮ್ಮಲ್ಲೇ ಮಾತನಾಡಿ ಕೊಳ್ಳತೊಡಗಿದವು, ತಾನು ಮಾಡಿ ಗೊತ್ತಿಲ್ಲದೇ ಇರುವಾಗ ಅವನು ಪ್ರೇಮಿಸುವ ಮತ್ತು ಕಾಮಿಸುವ ಕುರಿತು ನಮಗೆ ಹೇಗೆ ತಾನೇ ಹೇಳಬಲ್ಲನು? ನಿರಾಸೆಯಿಂದ, ಅಸಮಾಧಾನದಿಂದ ಗೊಣಗಿಕೊಳ್ಳುತ್ತ ಅವನನ್ನು ಒಬ್ಬಂಟಿ ಉಳಿಸಿ ಹೋದವು.

ಆ ರಾತ್ರಿ ಋಷಿಯು ತನ್ನ ಚಾಪೆಯ ಮೇಲೆ ಬೋರಲಾಗಿ ಮಲಗಿ ನೆಲಕ್ಕೆ ಮುಖ ಮಾಡಿ ಬೋರಾಡಿ ಅತ್ತ. ತನ್ನ ಕೈಗಳಿಂದಲೇ ತನ್ನೆದೆ ಬಡಿಬಡಿಸಿಕೊಂಡು ಅತ್ತ.

## ಬಟ್ಟೆ

ಒಂದು ದಿನ ಕುರೂಪ ಮತ್ತು ಚೆಲುವು ಎರಡೂ ಕಡಲ ದಂಡೆಯಲ್ಲಿ ಭೇಟಿಯಾದವು. ಅವು ತಂತಮ್ಮಲ್ಲೇ ಹೇಳಿಕೊಂಡವು ನಾವು ಕಡಲಲ್ಲಿ ಮೀಯೋಣ.

ನಂತರ ಅವು ಬಟ್ಟೆ ಕಳಚಿ ಕಡಲ ನೀರಿನಲ್ಲಿ ಈಜಾಡತೊಡಗಿದವು. ಸ್ವಲ್ಪ ಹೊತ್ತಾದ ನಂತರ ಕುರೂಪವು ದಂಡೆಗೆ ಬಂದು ಚೆಲುವಿನ ಬಟ್ಟೆಯನ್ನು ಧರಿಸಿ ನಡೆದು ಹೋಯಿತು.

ಚೆಲುವೂ ಕಡಲಿನಿಂದ ದಡಕ್ಕೆ ಬಂದು, ತನ್ನ ಬಟ್ಟೆ ಕಾಣದೇ, ಬೆತ್ತಲಾಗಿ ಹೋಗಲು ನಾಚಿ, ಕುರೂಪದ ಬಟ್ಟೆ ಧರಿಸಿದಳು. ತನ್ನ ದಾರಿ ಹಿಡಿದು ಹೋದಳು.

ಇವತ್ತಿನವರೆಗೂ ಸ್ತ್ರೀಪುರುಷರು ಅವರಿಬ್ಬರನ್ನು ತಪ್ಪಾಗಿ ಗುರುತಿಸುತ್ತಿದ್ದಾರೆ.

ಆದರೂ ಕೆಲವರಿದ್ದಾರೆ; ಚೆಲುವನ್ನು ಅವಳ ಮುಖದಿಂದ, ಅವಳ ಬಟ್ಟೆಯಿಂದಲ್ಲ, ಗುರುತಿಸುತ್ತಾರೆ. ಮತ್ತೆ ಕೆಲವರು ಕುರೂಪವನ್ನು ಅವನ ಮುಖದಿಂದ, ತೊಟ್ಟ ಬಟ್ಟೆ ಅವರ ಕಣ್ತಪ್ಪಿಸಲಾರದಂತೆ, ಗುರುತು ಹಿಡಿಯುತ್ತಾರೆ.

(ದಿ ವಾಂಡರರ್)